ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು).--

ಅ) ಹೌದು.

ಆ) ದಿನಾಂಕ ೧೬-೭-೧೯೭೫ರಲ್ಲಿ ವಶಪಡಿಸಿಕೊಳ್ಳಲಾಯಿತು.

ಇ) ಅಳವಡಿಸಲಾಗಿದೆ.

ಈ) ೧೯೮೫-೮೬ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ೬ ಲಕ್ಷ ರೂಗಳನ್ನು ಅಳವಡಿಸಲಾಗಿದೆ. ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ಅಂತರ್ ರಾಜ್ಯ ಬಸ್ಸುಗಳ ಪರವಾನೆಯಂನ್ನು ಹೆಚ್ಚಿಸುವುದು.

೧೧೮೪. ಶ್ರೀ ಆರ್. ವೆಂಕಟರಾವುಯ್ಯ (ಮುಳಬಾಗಿಲು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯೆಯಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿರುವ ಅಂತರ ರಾಜ್ಯ ಬಸ್ಸುಗಳ ಸಂಖ್ಯೆ ಎಷ್ಟು ?

ಆ) ಬಸ್ಸು ಪರವಾನಗಿಗಳನ್ನು ಹೆಚ್ಚಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಖಾಸಗಿ ಬಸ್ಸು ಮಾಲೀಕರಿಂದ ಬೇಡಿಕೆಗಳು ಬಂದಿದೆಯೆ ?

ಇ) ಒಡಂಬಡಿಕೆಯ ಅನುಸಾರ ಅಂತರ ರಾಜ್ಯ ಪರವಾನಗಿಯನ್ನು ಹೆಚ್ಚಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಮತ್ತು ರಾಜ್ಯ ಸಚಿವರು).—

ಅ) ೧೪೩೭

ಆ) ಬಂದಿವೆ.

ಇ) ವಿವಿಧ ಅಂತರ ರಾಜ್ಯಗಳ ಮಾರ್ಗಗಳಲ್ಲಿ ಬಸ್ಸು ಸೌಲಭ್ಯದ ಅವಶ್ಯಕತೆಗಳು ಗಣನಾವಾಗಿ ಅಂತರ ರಾಜ್ಯ ಬಸ್ಸು ಪರವಾನಿಗೆಗಳನ್ನು ಹೆಚ್ಚಿಸಲು ನೆರೆ ರಾಜ್ಯಗಳೊಡನೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಸರ್ಕಾರವು ಪರಿಶೀಲಿಸುವುದು.

ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳ ಪಟ್ಟಿ.

೧೩೬೮. ಶ್ರೀಮಾನ್ ಬಿ. ವಿ. ತುಂಗಳ(ಬೀಳಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯೆಯಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ವಿಭಾಗದಲ್ಲಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ಸಂಖ್ಯೆ ಎಷ್ಟು ? (ಪ್ರತಿಯೊಂದು ಡಿಪೋವಾರು ಮಾಹಿತಿ ಒದಗಿಸುವುದು)

ಆ) ಇದರಲ್ಲಿ ಗ್ರಾಮಾಂತರ ವೇಳಾದೂತ ತಡೆರಹಿತ ಮತ್ತು ಐಶರಾಮಿ ಬಸ್‌ಗಳ ಸಂಖ್ಯೆ ಎಷ್ಟು ?

ಇ) ಪ್ರತಿಯೊಂದು ಡಿಪೋವಿನಲ್ಲಿ ನಿಷ್ಕ್ರಿಯವಾಗಿ ನಿಂತಿರುವ ಬಸ್‌ಗಳ ಸಂಖ್ಯೆ ಎಷ್ಟು ?

ಈ) ಬಿಜಾಪುರ ವಿಭಾಗವಲ್ಲಿ ಹೆಚ್ಚುತ್ತಿರುವ ಪ್ರಯಾಣಿಕರ ಅನುಕೂಲಕ್ಕಾಗಿ ಈ ವರ್ಷ ಎಷ್ಟು ಹೊಸ ಬಸ್‌ಗಳನ್ನು (ಡಿಪೋವಾರು) ಒದಗಿಸಲಾಗುವುದು ಮತ್ತು ಎಂದಿನಿಂದ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಮತ್ತು ವಸತಿ ಮಂತ್ರಿಗಳು).—

ಅ) ಬಿಜಾಪುರ ವಿಭಾಗದಲ್ಲಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ೪೪೧ ಬಸ್‌ಗಳಿವೆ.

	ಡಿಪೋವಾರು ವಿವರಗಳು		ಬಸ್‌ಗಳ ಸಂಖ್ಯೆ
೧	ಬಿಜಾಪುರ	...	೯೨
೨	ಬಾಗಲಕೋಟೆ	...	೬೪
೩	ಮಂದ್ದೇಬಿಹಾಳ	...	೫೯
೪	ಜಮಖಂಡಿ	...	೭೬
೫	ಇಂಡಿ	...	೪೬
೬	ಬಾದಾಮಿ	...	೪೪
೭	ಅಥಣಿ	...	೬೦
			೪೪೦

ಅ) ೧ ಗ್ರಾಮಾಂತರ —
೨ ಸಾಮಾನ್ಯ ಮತ್ತು ವೇಷದೂತ ೪೦೬
೩ ಅರೆ ಸಂಖ್ಯಾಸೀನ ೯
೪ ನಗರ ಸಾರಿಗೆ ಬಸ್‌ಗಳು ೨೬

೪೪೦ ಬಸ್‌ಗಳಲ್ಲಿ ೧೭ ಬಸ್‌ಗಳು ನಿಷ್ಕ್ರಿಯವಾಗಿ ನಿಂತಿದೆ.

ಇ) ಡಿಪೋವಾರು ನಿಷ್ಕ್ರಿಯವಾಗಿ ನಿಂತಿರುವ ಬಸ್‌ಗಳ ವಿವರ ಈ ಕೆಳಗೆ ನೀಡಲಾಗಿದೆ.

೧	ಬಿಜಾಪುರ	...	೨ ಬಸ್‌ಗಳು
೨	ಬಾಗಲಕೋಟೆ	...	೧
೩	ಮಂದ್ದೇಬಿಹಾಳ	...	...
೪	ಜಮಖಂಡಿ	...	...
೫	ಇಂಡಿ	...	...
೬	ಬಾದಾಮಿ	...	...
೭	ಅಥಣಿ	...	...
೮	ವಿಭಾಗೀಯ ಕಾರ್ಯಾಗಾರ		೯
			೧೨

ಈ) ಯೋಜನೆಗನುಸಾರ ೧೯೮೫-೮೬ರ ಸಾಲಿನಲ್ಲಿ ೯೬ ಹೊಸ ಬಸ್‌ಗಳನ್ನು ಸೇರಿಸಲು ಉದ್ದೇಶಿಸಲಾಗಿದೆ. ಅವುಗಳ ವಿವರಗಳು ಈ ಕೆಳಕಂಡಂತಿವೆ.

	ಡಿಪೋ	ಸಾಮಾನ್ಯ ದರ್ಜೆ	ಅರೆಸುಖಾಸೀನ	ಬದಲಿ ವಾರಗಳು	ಒಟ್ಟು
೧	ಬಿಜಾಪುರ	೩	೨	೧೨	೧೭
೨	ಮುದ್ದೇಬಿಹಾಳ	೫	೨	೭	೧೪
೩	ಜಮಖಂಡಿ	೫	...	೧೩	೧೮
೪	ಬಾದಾಮಿ	೪	...	೬	೧೦
೫	ಇಂಡಿ	೪	...	೭	೧೧
೬	ಬಾಗಲಕೋಟೆ	೫	...	೭	೧೨
೭	ಅಥಣಿ	೫	...	೯	೧೪
		೩೧	೪	೬೧	೯೬

ವಿಭಾಗಕ್ಕೆ ಸೆಪ್ಟೆಂಬರ್‌ರವರೆವಿಗೆ ಕೊಡಲಾದ ಹೊಸ ಬಸ್‌ಗಳ ಸಂಖ್ಯೆ.

ಬದಲಿಗಾಗಿ	...	೩೧ ಬಸ್‌ಗಳು
ವಿಸ್ತರಣೆಗಾಗಿ	...	೧೯ ಬಸ್‌ಗಳು
ಒಟ್ಟು		೫೦ ಬಸ್‌ಗಳು

ಮುಂಧೋಳದಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ.

೧೩೨೪. ಶ್ರೀ ಬಾಬುರೆಡ್ಡಿ ವೆಂ. ತಂಗಳ (ಬೀಳಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕು ಕೇಂದ್ರವಾದ ಮುಂಧೋಳದಲ್ಲಿ ಹೊಸ ಬಸ್ ನಿಲ್ದಾಣದ ಕಾರ್ಯ ನಿರ್ಮಾಣಕ್ಕೆ ಟೆಂಡರ್ ಕರೆದದ್ದು ಯಾವಾಗ ?

ಆ) ಕಾನೂನಿನಂತೆ ಟೆಂಡರ್ ಕರೆದು ನಿರ್ಮಾಣ ಕಾರ್ಯ ಆರಂಭವಾಗಿ ೩ ವರ್ಷಗಳಾದರೂ ಇನ್ನೂ ಪ್ರಗತಿ ಪರವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಅದು ನಿರ್ಮಾಣ ಅಂತದಲ್ಲಿದ್ದಾಗಲೇ ಒಂದು ಸಲ ಕಂಪಿದು ಬಿದ್ದಿರುವುದಂ ಸರ್ಕಾರಕ್ಕೆ ತಿಳಿದಿದೆಯೇ ?

ಈ ಹಾಗಿದ್ದಲ್ಲಿ ಸದರೀ ಕೆಲಸ ಪೂರ್ಣಗೊಂಡು ಉದ್ಘಾಟನೆಯಾಗಲು ಇನ್ನೂ ಎಷ್ಟು ಅವಧಿಬೇಕು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ಮಂತ್ರಿಗಳು).—

ಅ) ದಿನಾಂಕ ೨೪–೧೦–೧೯೮೧ ರಲ್ಲಿ.

ಆ) ಬಂದಿದೆ.

ಇ) ತಿಳಿದಿದೆ ಹಿಂದಿನ ಬಸ್ ನಿಲ್ದಾಣವನ್ನು ಬೇರ್ಪಡಿಸಲು ನಿರ್ಮಿಸಿದ ಮಂಧ್ಯಂತರ ಗೋಡೆಯ ಕೆಲವು ಭಾಗವನ್ನು ತಿಳಿಗೇಡಿಗಳು ರಾತ್ರಿ ವೇಳೆಯಲ್ಲಿ ಹಾನಿಗೊಳಪಡಿಸಿದ್ದರು.

ಇ) ಬಸ್‌ನಿಲ್ದಾಣ ಕಾರ್ಯ ಪೂರ್ಣಗೊಂಡಿರುವುದರಿಂದ ಶೀಘ್ರದಲ್ಲೇ ಉದ್ಘಾಟಿಸಲಾಗುವುದು.

ಜಮಖಂಡಿ ಉಪ ವಿಭಾಗದಲ್ಲಿರುವ ನಗರಗಳಿಗೆ ವರ್ತಂಲ ಬಸ್ಸುಗಳನ್ನು ಓಡಿಸುವುದು.

೧೩೨೫. ಶ್ರೀ ಬಿ. ವಿ. ತಂಗಳ (ಬೀಳಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಜಮಖಂಡಿ ಉಪ ವಿಭಾಗದಲ್ಲಿರುವ ಜಮಖಂಡಿ ರಬಕವಿ, ಬನಹಟ್ಟಿ, ಮಹಾಲಿಂಗಪುರ ಹಾಗೂ ತೇರದಾಳ್, ಮುಧೋಳ ನಗರಗಳು ಔದ್ಯಮಿಕ ನಗರಗಳಾಗಿ ಬೆಳೆಯುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ ಅತ್ಯಂತ ಜನದಟ್ಟಣೆಯಿರುವ ಈ ನಗರಗಳಿಗೆ ಪ್ರಯಾಣಿಕರ ಅನುಕೂಲಕ್ಕಾಗಿ ಈ ನಗರಗಳಿಗೆ ಅನ್ವಯಿಸುವಂತೆ ಪ್ರತಿ ಗಂಟೆಗೊಂದಾವರ್ತಿ (ವರ್ತ್ಯಂಲ) ಸಿಟಿ ಬಸ್‌ಗಳನ್ನು ಓಡಿಸುವ ಆಲೋಚನೆ ಏನಾದರೂ ಇದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ತೀವ್ರ ಕ್ರಮ ಕೈಗೊಂಡು ಜಮಖಂಡಿ ಡಿಪೋಕ್ಕೆ ಎಷ್ಟು ಬಸ್ಸುಗಳನ್ನು ಒದಗಿಸಲಾಗುವುದು ಹಾಗೂ ಯಾವಾಗ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ಮಂತ್ರಿಗಳು).—

ಅ)ಬಂದಿದೆ.

ಆ) ಇಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.